C.R.P.67

| Form No.4 (Civil) Deposition Sheets (R.P.No.57) |
| --- |

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್.ಸಿ. ಸಂಖ್ಯೆಃ 68/2024**

ಪ್ರಾಸಾ. 03 ಚಾಸಾ. 03

| | |
| --- | --- |
| ಸಾಕ್ಷಿದಾರರ ಹೆಸರು | ಸಾಗರ |
| ತಂದೆಯ ಹೆಸರು | ಮುನಿರತ್ನ |
| ವಯಸ್ಸು | 25 ವರ್ಷಗಳು |
| ಉದ್ಯೋಗ | ಮರಗೆಲಸ |
| ವಾಸ | ಹಾಲಹಳ್ಳಿಕೆರೆ, ಮಂಡ್ಯ. |

**ಸಾಕ್ಷಿಯನ್ನು ದಿನಾಂಕಃ02.04.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ಮತ್ತು ಚಾಸಾ-2 ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತಿಲ್ಲ.

2. ಸುಮಾರು 03 ವರ್ಷಗಳ ಹಿಂದೆ ಹಾಲಹಳ್ಳಿಯಲ್ಲಿ ಯಾವುದೋ ಗಲಾಟೆ ವಿಚಾರ ನಡೆಯುತ್ತಿತ್ತು, ಆ ಸಂದರ್ಭದಲ್ಲಿ ನೂಕುನುಗ್ಗಾಟದಲ್ಲಿ ಚಾಸಾ-2 ರವರಿಗೆ ಗಾಯವಾಗಿದೆ ಎಂದು ಗೊತ್ತಾಗಿ ನಾನು ಸದರಿ ಸ್ಥಳವಾದ ಹಾಲಹಳ್ಳಿಗೆ ಹೋಗಿದ್ದೆ. ಚಾಸಾ-2 ರವರಿಗೆ ಏಟಾಗಿದ್ದ ಕಾರಣ ನಾನು ಆತನನ್ನು ಮಂಡ್ಯದ ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ಆತನನ್ನು ವಿಚಾರಿಸಿದಾಗ ಗಲಾಟೆ ನಡೆಯುವಾಗ ತಳ್ಳಾಟದ ಸಂದರ್ಭದಲ್ಲಿ ಏಟಾಗಿದೆ ಎಂದು ನುಡಿದಿರುತ್ತಾನೆ. ಅಲ್ಲಿ ಒಂದು ದಿನ ಚಿಕಿತ್ಸೆ ಪಡೆದು ನಂತರ ಮೈಸೂರಿನ ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ

ಆಗಿರುವುದಿಲ್ಲ. ಚಾಸಾ-2 ರವರಿಗೆ ಯಾರು ಹಲ್ಲೆ ಮಾಡಿದರು ಎಂದು ನಾನು ಕಣ್ಣಾರೆ ನೋಡಿರುವುದಿಲ್ಲ. ಮು.ಮ.1 ನ್ನು ಈ ಹಿಂದೆ ನೋಡಿರುವುದಿಲ್ಲ ಮತ್ತು ಗುರುತಿಸಲು ಆಗುವುದಿಲ್ಲ.

3. ಈಗ ತೋರಿಸಿದಂತಹ ಒಂದು ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲೆ ನೇಟೀಸ್ ಆಗಿರುತ್ತದೆ. ಸದರಿ ನೋಟೀಸನ್ನು ನಿಪಿ-8 ಎಂದುಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಅದೇ ರೀತಿ ನಿಪಿ-2 ನ್ನು ನೋಡುತ್ತಿದ್ದು, ಸದರಿ ಮಹಜರಿನಲ್ಲಿ ತನ್ನ ಸಹಿ ಇರುವುದಾಗಿ ನುಡಿದಿದ್ದರಿಂದ ಅದನ್ನು ನಿಪಿ-2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ನಿಪಿ-2 ಕ್ಕೆ ಪೊಲೀಸ್ ಠಾಣೆಯಲ್ಲಿ ಮಧ್ಯಾಹ್ನದ ಸಮಯದಲ್ಲಿ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಈಗ ನೋಡುತ್ತಿರುವ ಎರಡು ಫೋಟೋಗಳು ನಿಪಿ-3(1 ಮತ್ತು 2) ನ್ನು ನೋಡುತ್ತಿದ್ದು, ಸದರಿ ಫೋಟೋಗಳಲ್ಲಿ ನಾನು ಇದ್ದೇನೆ. ಸದರಿ ಸ್ಥಳ ಚಾಸಾ-2 ಬಿದ್ದು ಏಟು ಮಾಡಿಕೊಂಡ ಸ್ಥಳವಾಗಿದ್ದು, ಪೊಲೀಸರು ನನ್ನನ್ನು ಕರೆದುಕೊಂಡು ಹೋಗಿ ತೆಗೆಸಿದ್ದರು. ಆದರೆ ಯಾವ ಕಾರಣದಿಂದ ಫೋಟೋ ತೆಗೆದರು ಗೊತ್ತಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ನನ್ನ ವಿಚಾರಣೆ ಮಾಡಿರುವುದಿಲ್ಲ ಮತ್ತು ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ದಿನಾಂಕಃ23.06.2023 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ಹಾಲಹಳ್ಳಿ ಕೆರೆ 2 ನೇ ಕ್ರಾಸ್ ನಲ್ಲಿರುವ 2 ನೇ ಆರೋಪಿಯ ಮನೆ ಬಳಿ ಹೋಗುತ್ತಿದ್ದಾಗ ಚಾಸಾ-1 ಮತ್ತು ಚಾಸಾ-2 ರವರರು ಹಾಗೂ ಆರೇಪಿತರ ಮಧ್ಯೆ ಜೋರಾಗಿ ಮಾತುಕತೆ ನಡೆಯುತ್ತಿದ್ದಾಗ ನಾನು ಅಲ್ಲೇ ನಿಂತುಕೊಂಡು ನೋಡುತ್ತಿದ್ದೆ ಎಂದರೆ ಸರಿಯಲ್ಲ.

2 ಆರೋಪಿ ಬಳಿ ಚಾಸಾ-1 ರವರು ಮತನಾಡಬೇಕು ಎಂದು ಹೋಗುತ್ತಿದ್ದಂತೆ 2 ನೇ ಆರೋಪಿ ಅಲ್ಲಿಂದ ಹೋಗುತ್ತಿದ್ದ, ಆಗ ಚಾಸಾ-1 ನಿಂತುಕೊ ಎಂದು ಹೇಳಿದಾಗ ಇಬ್ಬರು ಆರೋಪಿತರೂ ಸೇರಿ ಚಾಸಾ-1 ಮತ್ತು ಚಾಸಾ-2 ರವರನ್ನು ಅಡ್ಡಗಟ್ಟಿ ಸಾಲ ಕೇಳಲು ಬಂದಿದ್ದೀರಾ ಸೂಳೆಮಕ್ಕಳ ಎಂದು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಚಾಸಾ-2 ರವರು ಹಣ ವಾಪಸ್ಸು ಕೊಡದೇ ಬೈಯತ್ತಿದ್ದೀರಾ ಎಂದು ಕೇಳಿದಾಗ 1 ನೇ ಆರೋಪಿ ಏಕಾಏಕಿ ಆತನಿಗೆ ಸಾಯಿಸುವ ಉದ್ದೇಶದಿಂದ ಆತನ ಬಳಿಯಿದ್ದ ಈಗ ತೋರಿಸಿದ ಮು.ಮ.1 ಡ್ರ್ಯಾಗನ್ ನಿಂದ ಚಾಸಾ-2 ರವರ ಮೇಲೆ ಹಲ್ಲೆ ಮಾಡಿ ರಕ್ತಗಾಯ ಪಡಿಸಿದನು ಎಂದರೆ ಸರಿಯಲ್ಲ. ಡ್ರ್ಯಾಗನ್ನಿಂದ ಮತ್ತೊಮ್ಮೆ ಹಲ್ಲೆ ಮಾಡಲು ಪ್ರಯತ್ನಿಸಿ ಚಾಸಾ-2 ರವರ ಬಲಗೈಗೆ ಹೊಡೆದನು ಎಂದರೆ ಸರಿಯಲ್ಲ.

3. ನಂತರ 2 ನೇ ಆರೋಪಿ ಮು.ಮ.1 ರಿಂದ ಚಾಸಾ-2 ರವರ ಎಡತೋಳಿನ ಮೇಲೆ ಹೊಡೆದು ರಕ್ತಗಾಯಪಡಿಸಿದನು ಎಂದರೆ ಸರಿಯಲ್ಲ. ಆಗ ಚಾಸಾ-1 ಮತ್ತು ನಾನು ಸೇರಿ ಜಗಳ ಬಿಡಿಸಿದಾಗ ಆರೋಪಿತರು ನಮಗೆ ದಮ್ಕಿ ಹಾಕಿ ಡ್ರ್ಯಾಗನ್ ಸಮೇತ ಹೊರಟು ಹೋದರು ಎಂದರೆ ಸರಿಯಲ್ಲ. ನಂತರ ಚಾಸಾ-1 ರವರಿಗೆ ನಾವು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಮೈಸೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದೆವು ಎಂದರೆ ಸರಿಯಲ್ಲ. ನಾನು ಚಸಾ-1 ರವರನ್ನು ವಿಚಾರಿಸಿದಾಗ ಹಣದ ವಿಚಾರವಾಗಿ ಗಲಾಟೆ ನಡೆದಿದೆ ಎಂದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ದಿ:24.06.2023 ರಂದು ಮಧ್ಯಾಹ್ನ ಚಾಸಾ-1 ರವರು ಪೊಲೀಸ್ ಠಾಣೆಗೆ ಹೋಗಿ ನಿಪಿ-1 ರಂತೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ.

4. ಚಾಸಾ-1 ರವರು ದೂರು ಕೊಟ್ಟ ನಂತರ ಪೊಲೀಸರು ಘಟನೆ ನಡೆದಿದ್ದ ಸ್ಥಳಕ್ಕೆ ಭೇಟಿ ಮಾಡಿದಾಗ ಚಾಸಾ-1 ರವರು ಹಾಜರಿದ್ದು ಸ್ಥಳವನ್ನು ತೋರಿಸಿದ ಮೇರೆಗೆ ಪೊಲೀಸರು ನನಗೆ ನಿಪಿ-8 ರಂತೆ ನೋಟೀಸ್ ನೀಡಿ ನನ್ನ ಮತ್ತು ಚಾಸಾ-4 ರವರ ಸಮಕ್ಷಮ ನಿಪಿ-2 ರಂತೆ ಮಧ್ಯಾಹ್ನ 1.30 ರಿಂದ 2.30 ಗಂಟೆಯವರೆಗೆ ಮಹಜರ್ ಮಾಡಿ, ನಿಪಿ-3(1 ಮತ್ತು 2) ರಂತೆ ಎರಡು ಫೋಟೋ ತೆಗೆದರು ಎಂದರೆ ಸರಿಯಲ್ಲ.

**5.** ನಂತರ ಮಹಜರ್ ಮಾಡಿದ ದಿನವೇ ಘಟನೆಯ ಬಗ್ಗೆ ಈಗ ಓದಿ ಹೇಳಿದ ಪ್ರಕಾರ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯನ್ನು ನಿಪಿ-**9** ಎಂದು ಗುರುತಿಸಲಾಯಿತು. ಆ ರೀತಿ ಹಣದ ವಿಚಾರವಾಗಿ ಆರೋಪಿ ಹಾಗೂ ಚಾಸಾ-**1** ಮತ್ತು ಚಾಸಾ-**2** ರವರ ಮಧ್ಯೆ ಘಟನೆ ನಡೆದ್ದಿದರೂ ಸಹ ಹಾಗೂ ಘಟನೆಯನ್ನು ನಾನು ಕಣ್ಣಾರೆ ನೋಡಡಿದ್ದರೂ ಸಹ ಆರೋಪಿತರು ಚಾಸಾ-**2** ರವರ ಮೇಲೆ ಹಲ್ಲೆ ಮಾಡಿ ರಕ್ತಗಾಯ ಪಡಿಸಿದ್ದರೂ ಸಹ ಆರೋಪಿ ತರು ನನ್ನ ಸ್ನೇಹಿತರಾದ ಕಾರಣ ಅವರ ಜೊತೆ ರಾಜೀ ಮಾಡಿಕೊಂಡು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **1** ಮತ್ತು **2** ನೇ ಆರೋಪಿತರ ಪರ ಶ್ರೀ ಜೆ.ಪಿ. ವಕೀಲರಿಂದಃ

ಆರೋಪಿತರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

**2** ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.